# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010
www.souharda.coop | Ph: 080-23378375-80 | Email:souharda@souharda.coop
ನೋಂ.ಸಂಖ್ಯೆ: ಆರ್‌ಎಸ್‌ಆರ್/ಸೌ/ಕಾ/136/ನೋಂ.051/2001–02, ದಿ: 04.01.2002

**ಚುನಾವಣಾ ವಿಷಯ ಜರೂರು**

## ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

**ಸಂಯುಕ್ತ ಸಹಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಕೆಳಗಿನ ವಿಷಯಗಳನ್ನು ಗಮನಿಸಲು ಹಾಗೂ ಅಗತ್ಯವಿದ್ದಲ್ಲಿ ಸೂಕ್ತ ಕ್ರಮವಿಡಲು ಈ ಮೂಲಕ ಸೂಚಿಸಿದೆ.**

1. ದಿನಾಂಕ **18.10.2016** ರಂದು ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸಹಕಾರ ಚುನಾವಣಾ ಪ್ರಾಧಿಕಾರವು ವಿತರಿಸಿದ ಡೆಲಿಗೇಟ್ ನಮೂನೆಗಳನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಲಾಗಿತ್ತು. ಕೆಲವು ಡೆಲಿಗೇಟ್ ನಮೂನೆಗಳು ಸಂಬಂಧಿಸಿದ ಸಹಕಾರಿಗಳಿಗೆ ತಲುಪದೇ ಅಂಚೆ ಇಲಾಖೆಯ ಷರಾದೊಂದಿಗೆ ಹಿಂದಿರುಗಿರುತ್ತವೆ. ಯಾವುದೇ ಸಹಕಾರಿಗೆ ಡೆಲಿಗೇಟ್ ನಮೂನೆಯು ತಲುಪಿರದಿದ್ದಲ್ಲಿ, ಅಂತಹ ಸಹಕಾರಿಗಳು ಈ ಕುರಿತು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಸೂಚಿಸಿದೆ. ಅಂತಹ ಸಹಕಾರಿಗಳಿಗೆ ಡೆಲಿಗೇಟ್ ನಮೂನೆಗಳನ್ನು ಸಂಯುಕ್ತ ಸಹಕಾರಿಯ ಅಧಿಕಾರಿಗಳ ಮುಖಾಂತರ ಮುದ್ದಾಂ ತಲುಪಿಸಲಾಗುವುದು.
2. ಇದುವರೆಗೆ ಭರ್ತಿ ಮಾಡಿದ ಡೆಲಿಗೇಟ್ ನಮೂನೆಗಳನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸಿರದ ಸಹಕಾರಿಗಳು, ಚುನಾವಣೆಯಲ್ಲಿ ಭಾಗವಹಿಸಲು ಆಸಕ್ತರಿಲ್ಲದಿದ್ದಲ್ಲಿ ಆ ಕುರಿತು ಲಿಖಿತ ಪತ್ರವನ್ನು ಸಂಯುಕ್ತ ಸಹಕಾರಿಗೆ ಕೂಡಲೇ ಸಲ್ಲಿಸಲು ಸೂಚಿಸಿದೆ.
3. ಡೆಲಿಗೇಟ್ ಆಯ್ಕೆ ಕುರಿತು ಸಭೆ ನಡೆದು ಡೆಲಿಗೇಟ್ ನಮೂನೆಯನ್ನು ಸಲ್ಲಿಸಿದ ನಂತರ ಯಾವುದಾದರೂ ಸಹಕಾರಿಯ ಆಡಳಿತ ಮಂಡಲಿ ಚುನಾವಣೆ ನಡೆದಿದ್ದಲ್ಲಿ, ಅಂತಹ ಸಹಕಾರಿಗಳು ಹೊಸದಾಗಿ ಡೆಲಿಗೇಟ್ ನಮೂನೆಗಳನ್ನು ಸಲ್ಲಿಸಲು ಚುನಾವಣಾಧಿಕಾರಿಗಳು ಸೂಚಿಸಿರುತ್ತಾರೆ. ಆದ್ದರಿಂದ ಅಂತಹ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ, ಹೊಸದಾಗಿ ಡೆಲಿಗೇಟ್ ನಮೂನೆ ಪಡೆದು, ತುರ್ತು ಆಡಳಿತ ಮಂಡಲಿ ಸಭೆ ನಡೆಸಿ, ಡೆಲಿಗೇಟ್ ನಮೂನೆ ಭರ್ತಿ ಮಾಡಿ, ಮಂಡಲಿ ನಡವಳಿಯನ್ನು ಉಪನಿಬಂಧಕರಿಂದ ಧೃಢೀಕರಿಸಿ, ಸಂಯುಕ್ತ ಸಹಕಾರಿಗೆ ಸಲ್ಲಿಸಲು ಸೂಚಿಸಿದೆ.
4. ಭರ್ತಿ ಮಾಡಿದ ಡೆಲಿಗೇಟ್ ನಮೂನೆ ಸಲ್ಲಿಸಿರುವ ಆದರೆ, ಮಂಡಲಿ ನಡವಳಿಯನ್ನು ಉಪನಿಬಂಧಕರಿಂದ ಧೃಢೀಕರಿಸಿ ಸಲ್ಲಿಸಿರದ ಸಹಕಾರಿಗಳು ತಕ್ಷಣ ಮಂಡಲಿ ನಡವಳಿಗಳನ್ನು ಹಾಜರಾತಿ ಸಹಿತ ಸಂಬಂಧಿಸಿದ ಉಪನಿಬಂಧಕರಿಂದ ಧೃಢೀಕರಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸಲು ಸೂಚಿಸಿದೆ.

ಮೇಲೆ ಹೇಳಲಾದ ಎಲ್ಲಾ ವಿಷಯಗಳ ಕುರಿತು ಈಗಾಗಲೇ ಸಂಬಂಧಿಸಿದ ಸಹಕಾರಿಗಳಿಗೆ ಪತ್ರಗಳನ್ನು ಕಳುಹಿಸಲಾಗಿದೆ. ದೂರವಾಣಿಸಂಖ್ಯೆ ಲಭ್ಯವಿರುವ ಸಹಕಾರಿಗಳಿಗೆ ದೂರವಾಣಿ ಮುಖಾಂತರ ಸಹ ಸಂಪರ್ಕಿಸಿ ತಿಳಿಸಲಾಗಿದೆ. ಆದರೂ ಅನೇಕ ಸಹಕಾರಿಗಳಿಂದ ನಿರೀಕ್ಷಿತ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಈ ಸಾರ್ವಜನಿಕ ಪ್ರಕಟಣೆ ಮೂಲಕ ಮತ್ತೊಮ್ಮೆ ಸಂಬಂಧಿಸಿದ ಸಹಕಾರಿಗಳು ಮೇಲೆ ತಿಳಿಸಲಾದ ರೀತಿ ಅಗತ್ಯಕ್ರಮವಿಡಲು ಸೂಚಿಸಿದೆ.

ಡೆಲಿಗೇಟ್ ನಮೂನೆಗಳು ಸಂಬಂಧಿಸಿದ ಸಹಕಾರಿಗಳಿಗೆ ತಲುಪದೇ ಅಂಚೆ ಇಲಾಖೆಯ ಷರಾದೊಂದಿಗೆ ಹಿಂದಿರುಗಿರುವ ಸಹಕಾರಿಗಳ ಪಟ್ಟಿ, ಭರ್ತಿ ಮಾಡಿದ ಡೆಲಿಗೇಟ್ ನಮೂನೆಗಳನ್ನು ಸಂಯುಕ್ತಸಹಕಾರಿಗೆ ಸಲ್ಲಿಸಿರದ ಸಹಕಾರಿಗಳ ಪಟ್ಟಿ ಹಾಗೂ ಭರ್ತಿ ಮಾಡಿದ ಡೆಲಿಗೇಟ್ ನಮೂನೆ ಸಲ್ಲಿಸಿರುವ ಆದರೆ ಮಂಡಲಿ ನಡವಳಿಯನ್ನು ಉಪನಿಬಂಧಕರಿಂದ ಧೃಢೀಕರಿಸಿ ಸಲ್ಲಿಸಿರದ ಸಹಕಾರಿಗಳಪಟ್ಟಿಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್**www.souharda.coop**ನಲ್ಲಿ ಲಭ್ಯವಿರುತ್ತದೆ.

**ಮೇಲೆ ಹೇಳಲಾದ ಎಲ್ಲಾ ವಿಷಯಗಳ ಕುರಿತು ಸಂಬಂಧಿಸಿದ ಸಹಕಾರಿಗಳು ಐದು ದಿನಗಳೊಳಗೆ ಅಗತ್ಯ ಕ್ರಮವಿಟ್ಟು ಸಂಯುಕ್ತ ಸಹಕಾರಿಗೆ ಅಗತ್ಯ ದಾಖಲೆ/ಮಾಹಿತಿಗಳನ್ನು ಒದಗಿಸಲು ಈ ಮೂಲಕ ಸೂಚಿಸಿದೆ.**

ಸಹಿ/–
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

ದಿನಾಂಕ : **06.04.2017**
ಸ್ಥಳ : ಬೆಂಗಳೂರು